ಅ.ದಾವಾ ನಂ. 04/2019 ಪಿ.ಡಬ್ಲ್ಯೂ 1

ದಿನಾಂಕ 04-03-2020 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಃ ಪ್ರತಿವಾದಿ ಪರ ಶ್ರೀ ಎನ್ ಆರ್ ಕೆ ವಕೀಲರಿಂದ,

ನಾನು ವಿದ್ಯಾಭ್ಯಾಸ ಮಾಡಿಲ್ಲ. ನಾನು ತೆರಿಗೆ ಪಾವತಿದಾರಳಲ್ಲ. ನಾನು ದಾವಾ ಸ್ವತ್ತನ್ನು ನೋಡಿ ಅದರ ಬಗ್ಗೆ ತಿಳಿದುಕೊಂಡಿದ್ದೇನೆ. ಅದರ ವಿಸ್ತೀರ್ಣ ನನಗೆ ಹೇಳಲು ಗೊತ್ತಾಗುವುದಿಲ್ಲ. ನಾವು 12 ಲಕ್ಷಕ್ಕೆ ಮಾತುಕತೆ ಮಾಡಿ 7,40,000/- ರೂ ಗಳನ್ನು ಪ್ರತಿವಾದಿಗೆ ಕೊಟ್ಟಿರುತ್ತೇವೆ. ಪ್ರತಿವಾದಿಯರು ನನಗೆ ಸಂಬಂಧಿಕರಲ್ಲ. ನಾನು ಸದರೀ ಕರಾರು ಪತ್ರ ಅಗುವ ಮೊದಲು ಪ್ರತಿವಾದಿಯರಿಗೆ ನಾಲ್ಕು ಲಕ್ಷ ರೂ ಗಳನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ, ಸಾಕ್ಷಿ 7,40,000/- ರೂ ಗಳನ್ನು ಪ್ರತಿವಾದಿಗೆ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಸದರೀ ಪತ್ರವನ್ನು ನಾಗರಾಜನಾಯಕ ರವರು ತಯಾರು ಮಾಡಿದರು. ಸದರೀ ಪತ್ರವನ್ನು ಓದಿಸಿ ತಿಳಿದುಕೊಂಡು ನಾನು ಸಹಿ ಮಾಡಿದ್ದೇನೆ. ನಾನು ಕ್ರಯದ ಪ್ರತಿಫಲವನ್ನು ನಗದು ರೂಪದಲ್ಲಿ ನನ್ನ ತಂದೆ ಮೂಲಕ ಪ್ರತಿವಾದಿಯರಿಗೆ ಕೊಟ್ಟಿರುತ್ತೇನೆ. ಸದರೀ ಕರಾರು ಪತ್ರ ಆದ ನಂತರ ಪ್ರತಿವಾದಿಯರು ನಮ್ಮ ಬಳಿ ಯಾವತ್ತೂ ಸದರೀ ಪತ್ರವನ್ನು ರದ್ದು ಮಾಡುವ ಬಗ್ಗೆ ಬಂದು ಕೇಳಿಲ್ಲ. ಸದರೀ ಕರಾರು ಪತ್ರ ಅಗುವ ದಿವಸ ನಾನು ಪ್ರತಿವಾದಿಯರಿಗೆ ನಾಲ್ಕು ಲಕ್ಷ ರೂ ಗಳನ್ನು ಮಾತ್ರ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ . ಸಾಕ್ಷಿ 7,40,000/- ರೂ ಗಳನ್ನು ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಪ್ರತಿವಾದಿಯರು ಬಂದು ನೋಟೀಸ್ ಕೊಡಬೇಡಿ ಎಂದು ಹೇಳಿದ್ದರಿಂದ ನೋಟೀಸ್ ಕೊಟ್ಟಿಲ್ಲವೆಂದು ನಾನು ನನ್ನ ವಾದ ಪತ್ರದಲ್ಲಿ ಹೇಳಿಲ್ಲ . ಪ್ರತಿವಾದಿಯರು ನಮ್ಮ ಬಳಿ ಬಂದು ಯಾವತ್ತೂ ರಾಜಿಗೆ ಪ್ರಸ್ತಾಪ ಮಾಡಿಲ್ಲ. ನನ್ನ ಮತ್ತು ಪ್ರತಿವಾದಿಯರ ನಡುವೆ ದಾವಾ ಸ್ವತ್ತನ್ನು ಕ್ರಯ ಮಾಡುವ ಬಗ್ಗೆ ಯಾವುದೇ ಮಾತುಕತೆ ಆಗಿರಲಿಲ್ಲ ಎಂದರೆ ಸರಿಯಲ್ಲ, ಆದ್ದರಿಂದ ಪ್ರತಿವಾದಿಯರು ನನಗೆ ಕ್ರಯ ಪತ್ರ ಬರೆದುಕೊಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯನ್ನು ಕಸಿದುಕೊಳ್ಳುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ.ಕೇ.ಸ.ಇ.ಓ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ